**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ:- 816/2021</u>**

**ಪ್ರಾಸಾ:- 8 ಚಾಸಾ:- 23**

| | | |
|---|---|---|
| ಸಾಕ್ಷಿಯ ಹೆಸರು | : | ದಾವತ್ ಸಾಬ್ |
| ತಂದೆ/ಗಂಡನ ಹೆಸರು | : | ಐ . ಬಿ . ನದಾಫ್ |
| ವಯಸ್ಸು | : | 48 ವರ್ಷ |
| ವೃತ್ತಿ | : | ಲಾಡ್ಜ್ ನಲ್ಲಿ ಮ್ಯಾನೇಜರ್ ಕೆಲಸ |
| ವಾಸಸ್ಥಳ | : | ಹೊಸಪೇಟೆ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ:- **7.11.2023**

<u>ಮುಖ್ಯ ವಿಚಾರಣೆ: ವಿಶೇಷ ಅಭಿಯೋಜಕರಿಂದ</u>

ನಾನು ಹೊಸಪೇಟೆಯ ನದಾಫ್ ಲಾಡ್ಜ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಸಾಕ್ಷಿಗೆ ವಿ ಸಿ ಮುಖಾಂತರ 1 ನೇ ಆರೋಪಿಯನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ . ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ .

1 ನೇ ಆರೋಪಿ ನಮ್ಮ ಲಾಡ್ಜ್ ಗೆ ಯಾವತ್ತೂ ಯಾರನ್ನೂ ಕರೆದುಕೊಂಡು ಬಂದ ಬಗ್ಗೆ ನನಗೆ ಮಾಹಿತಿ ಇಲ್ಲ . ಪೋಲೀಸರು ನಮ್ಮ ಲಾಡ್ಜ್ ಹತ್ತಿರ ಈಗ್ಗೆ 2 ವರ್ಷಗಳ ಹಿಂದೆ ಬಂದು ಪಂಚನಾಮೆಯನ್ನು ಮಾಡಿ ಲಾಡ್ಜ್ ನ ಕೆಲವು ದಾಖಲೆಗಳನ್ನು ಕೇಳಿದ ಮೇರೆಗೆ ನಾನು ನೀಡಿರುತ್ತೇನೆ . ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು , ಪಂಚನಾಮೆಯನ್ನು ನಿಪಿ-37 ಎಂದು ಸಾಕ್ಷಿಯ ಸಹಿಯನ್ನು ನಿಪಿ-37 (ಎಂಬುವುದು ಸರಿಯಲ್ಲ. ) ಎಂದು ಗುರುತಿಸಲಾಯಿತು . ನಿಪಿ-37 ರ ಮಾಹಿತಿ ಇಲ್ಲ . ಸಾಕ್ಷಿಗೆ ನಿಪಿ-37 ರ ಕಾಲಕ್ಕೆ ತೆಗೆದ 6 ಪೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-38 ಎಂದು ಗುರುತಿಸಲಾಯಿತು . ನಿಪಿ-37 ಮತ್ತು 38 ನ್ನು ಯಾವ ಕಾರಣಕ್ಕಾಗಿ ಮತ್ತು ಯಾರ ವಿಚಾರಕ್ಕಾಗಿ ಮಾಡಿರುತ್ತಾರೆ ಗೊತ್ತಿಲ್ಲ . ಸಾಕ್ಷಿಗೆ ಲಾಡ್ಜ್ ನ ರಸೀದಿಯ ಜೆರಾಕ್ಸ್ ಪ್ರತಿ ಹಾಗೂ ಲಾಡ್ಜ್ ನ ದಾಖಲೆ ನಮೂದಿಸಿ ಮತ್ತು ಲಾಡ್ಜ್ ನ ದಿನವಹಿ ಹಾಗೂ

ದಾಖಲೆಗಳನ್ನು ತೋರಿಸಲಾಗಿ ಅವು ಯಾವ ಕಾರಣಕ್ಕೆ ಜಪ್ತು ಮಾಡಿರುತ್ತಾರೆ ಗೊತ್ತಿಲ್ಲ . ಸದರಿ ದಾಹಲೆಗಳು ಜೆರಾಕ್ಸ್ ಪ್ರತಿಗಳಾಗಿರುವುದರಿಂದ ನಿಶಾನೆಗಳಾಗಿ ಗುರುತಿಸಿರುವುದಿಲ್ಲ . ನಾನು ಪೋಲೀಸರ ಮುಂದೆ ಯಾವುದೆ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿಲ್ಲ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

ಪಾಟೀ ಸವಾಲುಃ ಅಭಿಯೋಜಕರವರಿಂದಃ

ದಿನಾಂಕಃ 16-6-2021 ರಂದು ಪೋಲೀಸರು ನಮ್ಮ ಲಾಡ್ಜ್ ಹತ್ತಿರ ಬಂದು ಆರೋಪಿ 1 ಈತನನ್ನು ತೋರಿಸಿ ಆತ ನಮ್ಮ ಲಾಡ್ಜ್ ಗೆ ಬಂದು ವಾಸವಿದ್ದ ಬಗ್ಗೆ ದಾಖಲೆಗಳನ್ನು ಪೊಲೀಸರು ಕೋರಿ ಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ . 1 ನೇ ಆರೋಪಿ ಮೃತ ಜಯಮ್ಮ ಮತ್ತು ರಾಮಲಕ್ಷ್ಮಿಯವರನ್ನು ದಿನಾಂಕಃ 20-3-2021 ರಂದು ರಾತ್ರಿ 9-15 ಗಂಟೆಗೆ ಕರೆದುಕೊಂಡು ಬಂದು ನಮ್ಮ ಲಾಡ್ಜ್ ನ ರೂಮ್ ನಂಃ 4 1 ನೇ ಆರೋಪಿಗೆ ಮತ್ತು ರೂಮ್ ನಂಃ 5 ನ್ನು ಮೃತ ಜಯಮ್ಮ ಮತ್ತು ರಾಮಲಕ್ಷ್ಮಿರವರಿಗೆ ನೀಡಿದ್ದೆವು ಎಂದರೆ ನನಗೆ ಗೊತ್ತಿಲ್ಲ . 1 ನೇ ಆರೋಪಿ ಮತ್ತು ಜಯಮ್ಮ ಹಾಗೂ ರಾಮಲಕ್ಷ್ಮಿ ಮರುದಿನ ಬೆಳಿಗ್ಗೆ ದಿಃ 21-3-2021 ರಂದು ಬೆಳಿಗ್ಗೆ 8-00 ಗಂಟೆಗೆ ಸದರಿ ರೂಮುಗಳನ್ನು ಖಾಲಿ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಆ ಕುರಿತಂತೆ ಪೋಲೀಸರು ನಿಪಿ- 37 ರಂತೆ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ . ನಿಪಿ-37 ರ ಕಾಲಕ್ಕೆ 1 ನೇ ಆರೋಪಿ ಲಾಡ್ಜ್ ನಲ್ಲಿ ವಾಸದ ಕುರಿತಂತೆ ಕೊಟ್ಟ ಹಣ ರೂ. 800 ಯ ರಸೀದಿ ಹಾಗೂ ನಮ್ಮ ಲಾಡ್ಜ್ ನ ನೊಂದಣಿ ಪತ್ರ ಫಾರಂ ನಂಃ ಸಿ ಹಾಗೂ 1 ನೇ ಆರೋಪಿಯ ಜೆರಾಕ್ಸ್ ಆಧಾರ್ ಕಾರ್ಡ್ ನ್ನು ನಾನು ಹಾಜರು ಪಡಿಸಿದಂತೆ ಪೋಲಿಸೀರು ಜಪ್ತು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ . ಆ ಸಮಯದಲ್ಲಿ ನಿಪಿ-38 ರಂತೆ ಪೋಟೋಗಳನ್ನು ತೆಗದಿದ್ದರು ಎಂದರೆ ಸರಿಯಲ್ಲ . ಅದೇ ದಿನ ಮತ್ತು ದಿಃ 10-8-2021 ರಂದು ನಾನು ಪೊಲೀಸರ ಮುಂದೆ ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮಿವರನ್ನು ಹಣಕಾಸಿನ ವಿಚಾರಕ್ಕೆ ಅಪಹರಿಸಿ ನಮ್ಮ ಲಾಡ್ಜ್ ನಲ್ಲಿ ತಂದಿಟ್ಟು ನಂತರ ಕರೆದುಕೊಂಡು ಹೋಗಿ ಕೊಲೆ ಮಾಡಿ ಕಾಲುವೆಗೆ ಬೀಸಾಡಿದ ಬಗ್ಗೆ ಈಗ ಓದಿ ಹೇಳಿದ ನಿಪಿ-39 ಮತ್ತು 40 ರಂತೆ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿದ್ದೆ ಎಂದರೆ ಸರಿಯಲ್ಲ .

ನನಗೆ 1 ನೇ ಆರೋಪಿ ಮೃತ ಜಯಮ್ಮ ಮತ್ತು ರಾಮಲಕ್ಷ್ಮಿರವರನ್ನು ನಮ್ಮ ಲಾಡ್ಜ್ ಗೆ ಅಪಹರಿಸಿ ಕರೆದುಕೊಂಡು ಬಂದ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರು ಸದರಿ ಇಬ್ಬರು ಹೆಣ್ಣು ಮಕ್ಕಳನ್ನು ಕೊಲೆ ಮಾಡಿ ಕಾಲುವೆಗೆ ಬೀಸಾಡಿದ ವಿಷಯ ಪೊಲಿಸೀರರಿಂದ ತಿಳಿದು ಬಂದಿದ್ದರೂ ಸಹ ನನಗೆ ಏನೂ ಗೊತ್ತಿಲ್ಲ ಎಂದು ಆರೋಪಿತರಿಗೆ ಅನುಕುಲಾವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.